15

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಪಾವಗಡ-561202

## ರಾಷ್ಟ್ರೀಯ ಐಕ್ಯತಾ ಸಪ್ತಾಹ

## 19-11-2020 ರಿಂದ 25-11-2020

## ದುರ್ಬಲ ವರ್ಗಗಳ ದಿನ (22-11-2020)




ದಿನಾಂಕ: 22-11-2020 ರ ಭಾನುವಾರದಂದು 11:00 ಗಂಟೆಗೆ ರಾಷ್ಟ್ರೀಯ ಐಕ್ಯತಾ ಸಪ್ತಾಹದ ಪ್ರಯುಕ್ತ ದುರ್ಬಲ ವರ್ಗಗಳ ದಿನ ಸಭೆಯನ್ನು ಕೋವಿಡ್-19 ರ ಪ್ರಯುಕ್ತ ತುಂಬಾ ಸರಳವಾಗಿ ಏರ್ಪಡಿಸಲಾಗಿದ್ದು, ಪ್ರಧಾನ ಭಾಷಣಾಕಾರರಾದ ಶ್ರೀ ಮಧುಕುಮಾರ್ ಎಂ ರವರು, ಸ್ವಾತಂತ್ರ್ಯದ ನಂತರ ಈ ವರ್ಗಗಳಿಗಾಗಿ ಸಂವಿಧಾನ ಹಾಗೂ ಎಲ್ಲಾ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಉದಾಹರಣೆಗೆ: ಗಂಗಾ ಕಲ್ಯಾಣ ಯೋಜನೆ, ಭೂ-ಹೀನರಿಗೆ 2 ಎಕರೆ ಜಮೀನು ನೀಡುವುದು, ಸ್ವಯಂ ಉದ್ಯೋಗ, ಆದಿ ಜಾಂಬವ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಅಭಿವೃದ್ಧಿಯನ್ನು ಕಾಣುತ್ತಿವೆ. ಆದರೆ ಆ ಕಾರ್ಯಕ್ರಮಗಳ ಅನುಷ್ಟಾನ ಸರಿಯಾದ ದಿಕ್ಕಿನಲ್ಲಿ ಆಗುತ್ತಿಲ್ಲ ಎಂಬುದಾಗಿ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಶ್ರೀ ಮಾರಪ್ಪ ಕೆ ಓ ರವರು ಸಂವಿಧಾನ ಹಾಗೂ ಸರ್ಕಾರಗಳು ಅನೇಕನೇಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದ್ದರೂ ನಿಜವಾದ ಬಡವರಿಗೆ ಸಿಗುತ್ತಿಲ್ಲ ಕಾರಣ ರಾಜಕೀಯ ಪ್ರಭಾವ ಅಲ್ಲದೆ ಇಂತವುಗಳ ಅನುಷದಟಾನದ ಅವಲೋಕನೆಯು ಸರಿಯಾದ ರೀತಿಯಲ್ಲಿ ಆಗದೇ ಇರುವುದು ಕಾರಣವಾಗಿದೆ. ಆದ್ದರಿಂದ ತಿಳಿದಂತ ನಾವುಗಳು ಅಂತಹ ವರ್ಗಗಳಲ್ಲಿ ಅರಿವನ್ನು ಮೂಡಿಸಬೇಕು ಎಂಬುದಾಗಿ ಕರೆಯನ್ನು ಕೊಟ್ಟರು. ಕಾರ್ಯಕ್ರಮದಲ್ಲಿ ಭಾಗಿಯಾದವರನ್ನು ವಾಣಿಜ್ಯಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಅನಂತರಾಜುರವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆನಂತರ ರಾಮಾಂಜಿನಮ್ಮ ಪಿ ಓ ರವರು ವಂದಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಂಥಪಾಲಕರಾದ ನಾಗರಾಜ ಹೆಚ್, ಸಹಾಯಕ ಪ್ರಾಧ್ಯಾಪಕರಾದ ರಾಜಣ್ಣ, ಸತೀಶ ಎನ್ ಆರ್, ಸುಮಾದೇವಿ, ಕಛೇರಿ ಅಧೀಕ್ಷಕರು ಕುಮಾರ್ ಬಿ ಎ, ದ್ವಿತೀಯ ದರ್ಜೆ ಸಹಾಯಕರು ಲಲಿತ ಎಂ ಎಸ್, ಅಟೆಂಡರ್ ತಿಮ್ಮಯ್ಯ ರವರು ಹಾಜರಿದ್ದರು.

IQAC Co-ordinator
Govt First Grade College for Women
Pavagada-561202

ಪ್ರಾಂಶುಪಾಲರು
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಪಾವಗಡ-561202.